# ಅಪರ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಚನ್ನಪಟ್ಟಣ.

**ಸಿಸಿ: 2606/2021**

| | | |
|---|---|---|
| ಪಿರ್ಯಾದುದಾರರು | ಃ | ಗೋಪಾಲ್ ಎಂ ಬಿನ್ ಮರಿಲಿಂಗೇಗೌಡ,<br>**48** ವರ್ಷ, ವಾಸಃ ನಂ.**235/1** ಎ,<br>ಎಲೆಕೇರಿ, ಚನ್ನಪಟ್ಟಣ ಟೌನ್,<br>ರಾಮನಗರ ಜಿಲ್ಲೆ. |

-ವಿರುದ್ಧ-

| | | |
|---|---|---|
| ಆರೋಪಿ | ಃ | ನಾಗರಾಜು .ಎನ್ ಬಿನ್ ನಿಂಗಣ್ಣ,<br>39 ವರ್ಷ,<br>ವಾಸ ಃ ನಂ.4297, 6 ನೇ ಕ್ರಾಸ್,<br>ರಾಜಕೆಂಪೇಗೌಡ ಬಡಾವಣೆ,<br>ಚನ್ನಪಟ್ಟಣ ಟೌನ್, ರಾಮನಗರ ಜಿಲ್ಲೆ. |

## ಆಪಾದನೆ

ಆರೋಪಿಯಾದ ನೀವು ಹಾಗೂ ಫಿರ್ಯಾದುದಾರರು ಸುಮಾರು ವರ್ಷಗಳಿಂದ ಪರಿಚಯಸ್ಥರು ಹಾಗೂ ಸ್ನೇಹಿತರಾಗಿದ್ದು, ಈ ಪರಿಚಯದ ಮೇರೆಗೆ ಆರೋಪಿಯಾದ ನೀವು ಆರ್ಥಿಕ ತೊಂದರೆ ನೀಗಿಸುವ ಸಲುವಾಗಿ ಹಣದ ಅವಶ್ಯಕತೆ ಇದೆ ಎಂದು ದಿಃ **02.10.2020** ರಂದು ಫಿರ್ಯಾದುದಾರರಿಂದ ರೂ.**9,25,000/-**ಗಳ ಹಣವನ್ನು ಸಾಲವಾಗಿ ಪಡೆದಿರುತ್ತೀರಿ ಹಾಗೂ ಸದರಿ ಹಣವನ್ನು ಪಿರ್ಯಾದುದಾರರಿಗೆ ಒಂದು ವರ್ಷದ ಒಳಗೆ ಮರುಪಾವತಿ ಮಾಡುತ್ತೇನೆಂದು ಹೇಳಿರುತ್ತೀರಿ. ತದನಂತರ ಅವರು ಆರೋಪಿಯಾದ ನಿಮ್ಮನ್ನು ಹಣವನ್ನು ಮರುಪಾವತಿಸುವಂತೆ ಕೇಳಿದಾಗ ಆರೋಪಿಯಾದ ನೀವು ಸದರಿ ಹಣದ ಮರುಪಾವತಿಗೆ ಸಾಲದ ಭದ್ರತೆಗಾಗಿ ಚನ್ನಪಟ್ಟಣದ ಅಕ್ಕೂರು ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಎರಡು ಚೆಕ್ಕುಗಳನ್ನು ಅಂದರೆ ದಿನಾಂಕಃ 20.09.2021 ರ ಚೆಕ್ ನಂಃ 064600 ರೂ.4,50,000/- ಎಂದು ನಮೂದು ಮಾಡಿ ಮತ್ತು ದಿನಾಂಕಃ 05.10.2021 ರ ಚೆಕ್ ಸಂಃ 064597 ರೂ.4,75,000/- ಎಂದು ನಮೂದು ಮಾಡಿ ಅನ್ನು ಬ್ಯಾಂಕಿಗೆ ಹಾಜರುಪಡಿಸುವಂತೆ ಪಿರ್ಯಾದುದಾರರಿಗೆ ನೀಡಿ ನಗದೀಕರಣಗೊಳಿಸಿಕೊಳ್ಳುವಂತೆ ಹೇಳಿರುತ್ತೀರಿ, ಅದರಂತೆ ಪಿರ್ಯಾದುದಾರರು ನೀವು ಕೊಟ್ಟ ಚೆಕ್ಕುಗಳನ್ನು ಪಿರ್ಯಾದುದಾರರು ಖಾತೆ ಹೊಂದಿರುವ ಚನ್ನಪಟ್ಟಣ ಶಾಖೆಯ

ಬ್ಯಾಂಕ್ ಆಫ್ ಬರೋಡಾಕ್ಕೆ ದಿಃ 13.10.2021 ರಂದು ನಗದೀಕರಣಕ್ಕಾಗಿ ಸಲ್ಲಿಸಿದಾಗ, ಬ್ಯಾಂಕಿನವರು "**Funds insufficient**" ಎಂಬ ಹಿಂಬರಹದೊಂದಿಗೆ ಚೆಕ್‌ನ್ನು ದಿಃ**22.10.2021** ರಂದು ವಾಪಸ್ಸು ನೀಡಿರುತ್ತಾರೆ**.** ನಂತರ ಈ ವಿಷಯವನ್ನು ಪಿರ್ಯಾದುದಾರರು ನಿಮಗೆ ತಿಳಿಸಿದ್ದು ನೀವು ಹಾರಿಕೆಯ ಉತ್ತರವನ್ನು ನೀಡಿರುತ್ತೀರಿ**.** ಆದ್ದರಿಂದ ಅವರು ನಿಮಗೆ ವಕೀಲರ ಕಾನೂನು ತಿಳುವಳಿಕೆ ಪತ್ರವನ್ನು ನೊಂದಾಯಿತ ಅಂಚೆ ಮತ್ತು ತ್ವರಿತಗತಿಯ ಅಂಚೆಯ ಮೂಲಕ ದಿಃ 06.11.2021 ರಂದು ನೀಡಿದ್ದು, ಸದರಿ ನೋಟೀಸು ನಿಮಗೆ ತಲುಪಿದ್ದು ನೀವು ಅಸಮರ್ಥನೀಯ ಉತ್ತರ ನೀಡಿರುತ್ತೀರಿ ಹಾಗೂ ಚೆಕ್ಕಿನ ಯಾವುದೇ ಹಣವನ್ನು ಮರುಪಾವತಿ ಮಾಡಿರುವುದಿಲ್ಲ**.** ಆದಕಾರಣ ನೀವು ಕಲಂ**.138, 142** ಎನ್.ಐ**.** ಆಕ್ಟ್ ಮತ್ತು **420 IPC** ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ**.**

1. ಸದರಿ ಆಪಾದನೆ ಓದಿ ಹೇಳಿದ್ದು ಅರ್ಥವಾಯಿತೆ ?

ಉತ್ತರ ಃ

2. ನಿಮ್ಮ ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೋ ?

ಉತ್ತರ ಃ

(ಮೇಲ್ಕಂಡ ಆಪಾದನೆಯನ್ನು ಆರೋಪಿತನಿಗೆ ಓದಿ ಹೇಳಲಾಗಿ ಅದನ್ನು ಅರ್ಥೈಸಿಕೊಂಡು ನನಗೆ ನೀಡಿದ ಉತ್ತರವನ್ನು ನಮೂದಿಸಿಕೊಳ್ಳಲಾಯಿತು ಮತ್ತು ಈ ಒಂದು ಆಪಾದನೆ ಪತ್ರವು ಸತ್ಯವಾಗಿ ಮತ್ತು ಸಂಪೂರ್ಣವಾಗಿ ಆರೋಪಿತನು ನೀಡಿದ ಹೇಳಿಕೆಯನ್ನು ಒಳಗೊಂಡಿದೆಯೆಂದು ದೃಢೀಕರಿಸುತ್ತೇನೆ.)

ದಿನಾಂಕಃ 01.12.2022.

ಅಪರ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ. ಚನ್ನಪಟ್ಟಣ.